**ಸಾಕ್ಷಿಯನ್ನು ದಿನಾಂಕ 21.11.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಹೆಚ್ ವಿ ಎ ಕೆ ವಕೀಲರಿಂದಃ**

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ವಾದಕ್ಕೆ ಪೂರಕವಾಗಿ

ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಕುಟುಂಬದ ವಂಶವೃಕ್ಷವನ್ನು ಹಾಜರು ಮಾಡಿದ್ದು ನಿಪಿ1 ಎಂದು, ದಾವಾ ಸ್ವತ್ತುಗಳಿಗೆ ಸಂಬಂದಿಸಿದ ಮೂರು ಗಣಕೀಕೃತ ಅರ್ ಟಿಸಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ2 ರಿಂದ 4 ಎಂದು, ಸರ್ವೆ ನಂ 48/1 ರ ಏಳು ಕೈಬರಹದ ಅರ್ ಟಿಸಿಗಳ ದೃಡೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ5 ರಿಂದ 11 ಎಂದು ಗುರುತಿಸಲಾಯಿತು.

ಸರ್ವೆ ನಂ 216/2 ರ ಎರಡು ಗಣಕೀಕೃತ ಅರ್ ಟಿಸಿಗಳ ದೃಡೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ12 ಮತ್ತು 13 ಎಂದು ಗುರುತಿಸಲಾಯಿತು. ಸರ್ವೆ ನಂ 216 ರ ಏಳು ಕೈಬರಹದ ಅರ್ ಟಿಸಿಗಳ ದೃಡೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ14 ರಿಂದ 20 ಎಂದು ಗುರುತಿಸಲಾಯಿತು.

ಸರ್ವೆ ನಂ 291/8 ರ ಎರಡು ಗಣಕೀಕೃತ ಅರ್ ಟಿಸಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ21 ಮತ್ತು 22 ಎಂದು, ಸರ್ವೆ ನಂ 91/8 ರ ಏಳು ಗಣಕೀಕೃತ ಅರ್ ಟಿಸಿಗಳ ದೃಡೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ23 ಮತ್ತು 29 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿಆರ್ ವಕೀಲರಿಂದಃ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.